# WILL of GOD
# 316

## ನಾನು ದೇವರ ಚಿತ್ತವನ್ನು ತಿಳಿದುಕೊಳ್ಳುವುದು ಹೇಗೆ?

*"ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರಿ. ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದು ಅಂದರೆ ಉತ್ತಮವಾದದ್ದೂ ಮೆಚ್ಚಿಕೆಯಾದದ್ದೂ ದೋಷವಿಲ್ಲದ್ದೂ ಯಾವ ಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ."*
ರೋಮಾ 12:2

ದೇವರ ಚಿತ್ತವನ್ನು ತಿಳಿದುಕೊಳ್ಳುವುದು ಹಾಗೂ ನಡೆಯುವುದು ಬಹಳ ಮುಖ್ಯ. ಯೇಸುವಿನಂತೆ ಆಗಿರ್ರಿ. ಆತನು ಭೂಲೋಕಕ್ಕೆ, *"ನನ್ನ ಚಿತ್ತದಂತೆ ನಡೆಯುವದಕ್ಕಾಗಿ ನಾನು ಬಂದಿಲ್ಲ, ನನ್ನನ್ನು ಕಳುಹಿಸಿದಾತನ ಚಿತ್ತವನ್ನೇ ನೆರವೇರಿಸುವದಕ್ಕೆ"* ಬಂದೆನು ಎಂದು ಹೇಳಿದನು ಯೋಹಾನ 6:38. ಅದೇ ರೀತಿಯಲ್ಲಿ ಎಲ್ಲಾ ವಿಶ್ವಾಸಿಗಳಿಗೂ ದೇವರ ಚಿತ್ತವು ಹೆಚ್ಚಾಗಿ ಅನ್ವಯಿಸುತ್ತದೆ. ಆದಾಗ್ಯೂ, ನೀವು ಆತನೊಂದಿಗೆ ನಂಬಿಗಸ್ತಿಕೆಯಿಂದ ದಿನಾಲು ನಡೆಯುತ್ತಾ ಬೆಳೆಯುತ್ತಿರುವಾಗ, ಕ್ರಮೇಣವಾಗಿ ದೇವರು ವೈಯಕ್ತಿಕವಾಗಿ ವಿಶ್ವಾಸಿಗಳಿಗೆ ತನ್ನ ಚಿತ್ತವನ್ನು ತಿಳಿಯಪಡಿಸುತ್ತಾನೆ. *"ನೀವು ದೇವರ ಚಿತ್ತವನ್ನು ತಿಳಿದವರಾಗಿದ್ದೀರಿ. ಆತನು ನಿಮಗೆ ತಿಳುವಳಿಕೆಯನ್ನು ನೀಡುತ್ತಾನೆ. ಸ್ವಬುದ್ಧಿಯನ್ನೇ ಆಧಾರಮಾಡಿಕೊಳ್ಳದೆ ಪೂರ್ಣಮನಸ್ಸಿನಿಂದ ಯೆಹೋವನಲ್ಲಿ ಭರವಸವಿಡು. ನಿನ್ನ ಎಲ್ಲಾ ನಡವಳಿಯಲ್ಲಿ ಆತನ ಚಿತ್ತಕ್ಕೆ ವಿಧೇಯನಾಗಿರು; ಆತನೇ ನಿನ್ನ ಮಾರ್ಗಗಳನ್ನು ಸರಾಗಮಾಡುವನು,"* ಜ್ಞಾನೋಕ್ತಿ 3:5-6. ಸತ್ಯವೇದದಿಂದ ಎಲ್ಲಾ ವಿಶ್ವಾಸಿಗಳಿಗಿರುವ ಸಾಮಾನ್ಯ ದೇವರ ಚಿತ್ತವನ್ನು ನೀವು ತಿಳಿದಿದ್ದೀರಿ. ಆತನ ವೈಯಕ್ತಿಕ ಚಿತ್ತವು ದೇವರ ವಾಕ್ಯ ಮತ್ತು ನಂಬಿಗಸ್ತ ವಿಧೆಯತೆಯುಳ್ಳ ಜೀವಿತಕ್ಕೆ ವಿರೋಧಾತ್ಮಕವಿಲ್ಲದ ಸಂಯೋಜನೆಯಾಗಿದೆ. ಆ ವಿಧೇಯತೆಯ ಆಧಾರದ ಮೇಲೆ ನೀವು ಆತನು ನಿಮಗಾಗಿ ಹೊಂದಿರುವ ಚಿತ್ತವನ್ನು ನಿರ್ಧರಿಸಿ ವಿಧೇಯರಾಗಬಹುದು. ತಂದೆಯನ್ನು ಬೇಡಿಕೊಳ್ಳಿರಿ. ಆತನ ವಾಕ್ಯದಿಂದ, ಆತನ ಜ್ಞಾನದಿಂದ, ಆತನ ಜನರಿಂದ, ಹಾಗೂ ಆತನ ಸಮಾಧಾನದಿಂದ ಮಾರ್ಗದರ್ಶನವನ್ನು ಪಡೆದುಕೊಳ್ಳಿರಿ. ನೀವು ದೇವರ ಚಿತ್ತವನ್ನು ತಿಳುದಕೊಂಡಾಗ, ಆತನಿಗೆ ವಿಧೇಯರಾಗಿರಿ.

**ದೇವರ ಸಾಮಾನ್ಯ ಚಿತ್ತ.** ಹೆಚ್ಚಾಗಿ ದೇವರ ಸಾಮಾನ್ಯ ಚಿತ್ತವನ್ನು ಸತ್ಯವೇದದ ಆಜ್ಞೆಗಳಲ್ಲಿ, ತತ್ವಗಳಲ್ಲಿ, ಹಾಗೂ ಮಾದರಿಗಳಲ್ಲಿ ಕಂಡುಕೊಳ್ಳುತ್ತೇವೆ. ನಿಮ್ಮ ಜೀವಿತಕ್ಕೆ ದೇವರ ಚಿತ್ತವನ್ನು ತಿಳಿದುಕೊಳ್ಳಲು ಸತ್ಯವೇದವು ಪ್ರಾಥಮಿಕ ಮೂಲವಾಗಿದೆ. *"ನಿನ್ನ ವಾಕ್ಯವು ನನ್ನ ಕಾಲಿಗೆ ದೀಪವೂ ನನ್ನ ದಾರಿಗೆ ಬೆಳಕೂ ಆಗಿದೆ,"* ಕೀರ್ತನೆ 119:105.

1. ಆಜ್ಞೆಗಳು. ಸತ್ಯವೇದದಲ್ಲಿ ವಿಶ್ವಾಸಿಗಳಿಗೆ ಅನೇಕ ಆಜ್ಞೆಗಳನ್ನು ಹೀಗೆ ಕೊಡಲಾಗಿದೆ, *"ಯಾವಾಗಲೂ ಸಂತೋಷಿಸಿರಿ; ಎಡೆಬಿಡದೆ ಪ್ರಾರ್ಥನೆಮಾಡಿರಿ; ಎಲ್ಲಾದರಲ್ಲಿಯೂ ಕೃತಜ್ಞತಾಸ್ತುತಿಮಾಡಿರಿ; ಇದೇ ನಿಮ್ಮ ವಿಷಯವಾಗಿ ಕ್ರಿಸ್ತ ಯೇಸುವಿನಲ್ಲಿ ತೋರಿ ಬಂದ ದೇವರ ಚಿತ್ತ,"* 1 ಥೆಸಲೋನಿಕದವರಿಗೆ 5:16-18. ಹಾಗೂ *"ದೇವರ ಚಿತ್ತವೇನಂದರೆ... ಹಾದರಕ್ಕೆ ದೂರವಾಗಿರಬೇಕು,"* 1 ಥೆಸಲೋನಿಕದವರಿಗೆ 4:3. ಯೇಸು ಹೀಗೆ ಹೇಳಿದನು, *"ನೀವು ನನ್ನನ್ನು ಪ್ರೀತಿಸುವವರಾದರೆ ನನ್ನ ಆಜ್ಞೆಗಳನ್ನು ಕೈಕೊಂಡು ನಡೆಯುವಿರಿ,"* ಯೋಹಾನ 14:15. ಆಜ್ಞೆಗಳ ಸಂದರ್ಭಗಳನ್ನು ಅರ್ಥಮಾಡಿಕೊಳ್ಳಿ. ದೇವರು ನೋಹನಿಗೆ ಒಂದು ನಾವೆಯನ್ನು ಕಟ್ಟಬೇಕೆಂದು ಹೇಳಿದನು, ಆದಿಕಾಂಡ 6:14. ದೇವರು ಹಾಗೆ ಮಾಡಲು ನಿಮಗೆ ಹೇಳಲಿಲ್ಲ. ದೇವರು ದಾವೀದನಿಗೆ ಹೆಬ್ರೋನಿಗೆ ಹೋಗಬೇಕೆಂದು ಹೇಳಿದನು, 2 ಸಮುವೇಲ 2:1. ದೇವರು ಹಾಗೆ ಮಾಡಲು ನಿಮಗೆ ಹೇಳಲಿಲ್ಲ. ಯಾವುದೇ ಆಜ್ಞೆಯನ್ನು ಅದರ ಸಂದರ್ಭದಿಂದ ಹೊರತೆಗೆಯಬೇಡಿ.

2. ತತ್ವಗಳು. ನಿಮಗೆ ಅನುಸರಿಸಲು ಸತ್ಯವೇದದ ತತ್ವಗಳಿವೆ. ಲೂಕ 16:1-13 ರಲ್ಲಿರುವ ಒಳ್ಳೆ ಮನೆವಾರ್ತೆಯ ತತ್ವಗಳು. ಲೂಕ 14 ರ ಕೊನೆ ಭಾಗದಲ್ಲಿ ಶಿಷ್ಯತ್ವದ ಕ್ರಯದ ಬಗ್ಗೆ ತಿಳಿಸಲಾಗಿದೆ. ಲೂಕ 15 ರಲ್ಲಿ ಕಳೆದು ಹೋದ ಜನರನ್ನು ಹುಡುಕುವ ತತ್ವಗಳ ಬಗ್ಗೆ ಮೂರು ಸಾಮ್ಯಗಳಲ್ಲಿ ತಿಳಿಸಲಾಗಿದೆ. ಇವುಗಳನ್ನು ಹಾಗೂ ಸತ್ಯವೇದದ ಇತರೆ ತತ್ವಗಳನ್ನೂ ಸಹ ಅನುಸರಿಸಿರಿ.

3. ಮಾದರಿಗಳು. ಸತ್ಯವೇದದ ಆಜ್ಞೆಗಳು ಹಾಗೂ ತತ್ವಗಳು ದೇವರ ಸಾಮಾನ್ಯ ಚಿತ್ತವನ್ನು ನಿಮ್ಮ ಜೀವಿತಕ್ಕಾಗಿ ಕೊಡುತ್ತವೆ. ನಾವು ಅನುಸರಿಸುವಂತೆ ಸತ್ಯವೇದವು ಮಾದರಿಗಳಿಂದ ಕೂಡಿದೆ. ಯೇಸು ಕ್ರಿಸ್ತನ ಜೀವಿತವು ಅತ್ಯುತ್ತಮ ಮಾದರಿಯಾಗಿದೆ. ಶಿಷ್ಯರ ಕಾಲುಗಳನ್ನು ತೊಳೆದ ನಂತರ ಯೇಸು ಹೀಗೆ ಹೇಳಿದನು, *"ನಾನು ನಿಮಗೆ ಮಾಡಿದ ಮೇರೆಗೆ ನೀವು ಸಹ ಮಾಡುವಂತೆ ನಿಮಗೆ ಮಾದರಿಯನ್ನು ತೋರಿಸಿದ್ದೇನೆ,"* ಯೋಹಾನ 13:15. ನಾವು ಆತನ ದೀನತೆಯ ಮಾದರಿಯನ್ನು ಅನುಸರಿಸಬೇಕು, ಫಿಲಿಪ್ಪಿ 2:3-5. ನಾವು ಆತನ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕು, *"ಇದಕ್ಕಾಗಿಯೇ ನೀವು ಕರೆಯಲ್ಪಟ್ಟಿರಿ; ಕ್ರಿಸ್ತನು ಸಹ ನಿಮಗೋಸ್ಕರ ಬಾಧೆಯನ್ನನುಭವಿಸಿ ನೀವು ತನ್ನ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕೆಂದು ಮಾದರಿಯನ್ನು ತೋರಿಸಿಹೋದನು,"* 1 ಪೇತ್ರ 2:21. *"ಇದರಿಂದಲೇ ಆತನಲ್ಲಿದ್ದೇವೆಂಬದನ್ನು ತಿಳುಕೊಳ್ಳುತ್ತೇವೆ. ಆತನಲ್ಲಿ ನೆಲೆಗೊಂಡವನಾಗಿದ್ದೇನೆಂದು ಹೇಳುವವನು ಕ್ರಿಸ್ತನು ನಡೆದಂತೆಯೇ ತಾನೂ ನಡೆಯುವದಕ್ಕೆ ಬದ್ಧನಾಗಿದ್ದಾನೆ"* 1 ಯೋಹಾನ 2:5-6.

**ಎಚ್ಚರಿಕೆ.** ದೇವರು ಸುಳ್ಳುಗಾರನಲ್ಲ, ಕೀರ್ತನೆ 119:160. ದೇವರು ತನ್ನ ವಾಕ್ಯಕ್ಕೆ ಅವಿಧೇಯರಾಗುವಂತೆ ನಡೆಸುವುದಿಲ್ಲ, ಅಥವಾ ಹೇಳುವುದಿಲ್ಲ. ನಮ್ಮನ್ನು ಅಭಿವೃದ್ಧಿಪಡಿಸಲು ಯೇಸು ನಾಯಕರನ್ನು ನೇಮಿಸುತ್ತಾನೆ, ಎಫೆಸ 4:11-14. ಆದಾಗ್ಯೂ, ಅನೇಕ ಸುಳ್ಳು ಬೋಧಕರಿದ್ದಾರೆ, 2 ತಿಮೊಥೆ 4:3-4. ದೇವರು ತನ್ನ ವಾಕ್ಯಕ್ಕೆ ಅವಿಧೇಯರಾಗುವಂತೆ ಹೇಳುತ್ತಿದ್ದಾನೆ ಎಂದು ಎಂದಿಗೂ ನೆನೆಸಬೇಡಿ. ಒಂದು ವೇಳೆ ಸಭೆಯ ನಾಯಕರು ನಿಮಗೆ ದೇವರ ವಾಕ್ಯಕ್ಕೆ ಅವಿಧೇಯರಾಗುವಂತೆ ಹೇಳಿದರೆ, ಅವರು ಸುಳ್ಳು ಬೋಧಕರಾಗಿದ್ದಾರೆ.

**ದೇವರ ವೈಯಕ್ತಿಕ ಚಿತ್ತ.** ದೇವರು ವಿಶ್ವಾಸಿಗಳಿಗೆ ತನ್ನ ವೈಯಕ್ತಿಕ ಚಿತ್ತವನ್ನು ಹೊಂದಿದ್ದಾನೆ, ಕೀರ್ತನೆ 32:8, ಜ್ಞಾನೋಕ್ತಿ 3:5-6. ದೇವರ ಸಾಮಾನ್ಯ ಚಿತ್ತಕ್ಕೆ ವಿಧೇಯರಾಗಿರಿ. ನಂತರ ದೇವರ ವೈಯಕ್ತಿಕ ಚಿತ್ತವನ್ನು ಅರಿತುಕೊಳ್ಳಿ, ನಿಮಗೆ ಹೇಳುವಂತೆ ನಿರಂತರವಾಗಿ ದೇವರನ್ನು ಬೇಡಿಕೊಳ್ಳಿ. ಆತನ ಉತ್ತರಗಳನ್ನು ಆತನ ವಾಕ್ಯದಿಂದ, ಆತನ ಜ್ಞಾನದಿಂದ, ಆತನ ಜನರಿಂದ, ಹಾಗೂ ಆತನ ಸಮಾಧಾನದಿಂದ ಹುಡುಕಿರಿ.

**ಬೇಡಿಕೊಳ್ಳಿರಿ.** ದಾವೀದನಂತೆ ಪ್ರಾರ್ಥಿಸಿ, *"ನಿನ್ನ ಚಿತ್ತದಂತೆ ನಡಕೊಳ್ಳುವದನ್ನು ನನಗೆ ಕಲಿಸು,"* ಕೀರ್ತನೆ 143:10. ಅಪೊಸ್ತಲನಾದ ಪೌಲನು ಕೊಲೊಸ್ಸೆಯ ವಿಶ್ವಾಸಿಗಳು *"ಕರ್ತನ ಚಿತ್ತದ ವಿಷಯವಾದ ತಿಳುವಳಿಕೆಯಿಂದ ತುಂಬಿಕೊಂಡು,"* ಇರಲಿ ಎಂದು ಪ್ರಾರ್ಥಿಸಿದನು ಕೊಲೊಸ್ಸೆ 1:9. ನಿಮಗಾಗಿ ಮತ್ತು ಇತರರಿಗಾಗಿ ನಿಮ್ಮ ಆಸಕ್ತಿಯುಳ್ಳ ಪ್ರಾರ್ಥನೆಯು ದೇವರ ಚಿತ್ತವನ್ನು ತಿಳಿದುಕೊಳ್ಳಲು ಹಾಗೂ ಅದನ್ನು ನೆರವೇರಿಸುವುದಕ್ಕಾಗಿ ಆಗಿರಬೇಕು.

**ಮಾರ್ಗದರ್ಶನವನ್ನು ಪಡೆದುಕೊಳ್ಳಿರಿ.** ದೇವರು ತನ್ನ ವೈಯಕ್ತಿಕ ಚಿತ್ತವನ್ನು ವಾಕ್ಯದಿಂದ, ತನ್ನ ಜ್ಞಾನದಿಂದ, ತನ್ನ ಸಮಾಧಾನದಿಂದ ಬಹಿರಂಗಪಡಿಸುತ್ತಾನೆ. ದೇವರು ತನ್ನ ಚಿತ್ತವನ್ನು ನಿಮಗೆ ಪ್ರಕಟಪಡಿಸುವಂತೆ ಬೇಡಿಕೊಳ್ಳಿರಿ. ಆತನು ನಿಮ್ಮ ಪ್ರಾರ್ಥನೆಗಳಿಗೆ ಹೀಗೆ ಉತ್ತರಿಸುತ್ತಾನೆ:

1. ತನ್ನ ವಾಕ್ಯದಿಂದ. ದೇವರ ವೈಯಕ್ತಿಕ ಚಿತ್ತವನ್ನು ಅರಿತುಕೊಳ್ಳುವುದು ಕ್ರಮವಾಗಿ ಸತ್ಯವೇದವನ್ನು ಅಧ್ಯಯನ ಮಾಡುವುದಾಗಿದೆ. ಆತನ ವಾಕ್ಯದಿಂದ ಜ್ಞಾನವನ್ನು ಮತ್ತು ತಿಳುವಳಿಕೆಯನ್ನು ಸಂಪಾದಿಸಿಕೊಂಡಾಗ ದೇವರ ಚಿತ್ತವು ನಿಮಗೆ ಸ್ಪಷ್ಟವಾಗುತ್ತದೆ. ಆತನ ವಾಕ್ಯಕ್ಕೆ ವಿರುದ್ಧವಾಗಿ ಯಾವುದನ್ನೂ ಮಾಡದಂತೆ ಆತನು ನಿಮ್ಮನ್ನು ಎಂದಿಗೂ ನಡೆಸುವುದಿಲ್ಲ.

2. ಆತನ ಜ್ಞಾನ. ದೇವರ ಜ್ಞಾನವು ಆತ್ಮೀಕ ವಿಧೇಯತೆಯಿಂದ ಬರುತ್ತದೆ, 1 ಕೊರಿಂಥದವರಿಗೆ 2:14-15. *"ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರಿ. ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದು ಅಂದರೆ ಉತ್ತಮವಾದದ್ದೂ ಮೆಚ್ಚಿಕೆಯಾದದ್ದೂ ದೋಷವಿಲ್ಲದ್ದೂ,"* ರೋಮಾಪುರದವರಿಗೆ 12:2. ಆತನ ಜ್ಞಾನಕ್ಕಾಗಿ ಬೇಡಿಕೊಳ್ಳಿರಿ, *"ನಿಮ್ಮಲ್ಲಿ ಯಾವನಿಗಾದರೂ ಜ್ಞಾನ ಕಡಿಮೆಯಾಗಿದ್ದರೆ ಅವನು ದೇವರನ್ನು ಕೇಳಿಕೊಳ್ಳಲಿ, ಅದು ಅವನಿಗೆ ದೊರಕುವದು..."* ಯಾಕೋಬ 1:5.

3. ಆತನ ಜನರು. ದೇವರ ಚಿತ್ತವನ್ನು ಅರ್ಥಮಾಡಿಕೊಳ್ಳಲು ದೇವರ ಜನರೇ ಸಂಪನ್ಮೂಲರಾಗಿದ್ದಾರೆ. ಆತನ ವಾಕ್ಯವನ್ನು ಮಾತಿನಿಂದ ಅಥವಾ ಬರವಣಿಗೆಯಿಂದ ನಿಖರವಾಗಿ ಬೋಧಿಸುವವರು ಸಹಾಯಕರಾಗಿರುತ್ತಾರೆ, ಕೊಲೊಸ್ಸೆಯವರಿಗೆ 1:28. ಪರಿಪಕ್ವತೆಯುಳ್ಳ ವಿಶ್ವಾಸಿಗಳಿಂದ ಸಲಹೆಗಳನ್ನು ಪಡೆಯುವುದು ಉತ್ತಮ. ಒಬ್ಬರಿಗಿಂತ ಹೆಚ್ಚಿನವರಿಂದ ಸಲಹೆ ಪಡೆಯುವುದು ಒಳ್ಳೆಯ ಆಲೋಚನೆ, *"ಯೋಚನೆ ಹೇಳುವವರಿಲ್ಲದೆ ಉದ್ದೇಶಗಳು ನೆರವೇರವು, ಬಹುಮಂದಿ ಆಲೋಚನಾಪರರಿರುವಲ್ಲಿ ಈಡೇರುವವು,"* ಜ್ಞಾನೋಕ್ತಿ 15:22. ಪರಿಪಕ್ವತೆಯುಳ್ಳ ವಿಶ್ವಾಸಿಗಳೂ ಸಹ ತಪ್ಪು ಮಾಡಬಹುದು ಆದರೆ ದೇವರ ಚಿತ್ತವನ್ನು ನಿರ್ಧರಿಸಲು ಅವರು ನಿಮಗೆ ಅರ್ಥಪೂರ್ಣ ಒಳನೋಟಗಳನ್ನು ತಿಳಿಸಬಹುದು.

4. ಆತನ ಸಮಾಧಾನ. ದೇವರ ವೈಯಕ್ತಿಕ ಚಿತ್ತವನ್ನು ನಿರ್ಧರಿಸಲು ದೇವರ ಸಮಾಧಾನವೇ ಅಂತಿಮ ದೃಢೀಕರಣ, *"ಕ್ರಿಸ್ತನಿಂದಾದ ಸಮಾಧಾನವು ನಿಮ್ಮ ಹೃದಯಗಳಲ್ಲಿ ಯಜಮಾನನಂತಿದ್ದು ತೀರ್ಪುಹೇಳಲಿ,"* ಕೊಲೊಸ್ಸೆಯವರಿಗೆ 3:15. *"ಆಗ ಎಲ್ಲಾ ಗ್ರಹಿಕೆಯನ್ನು ಮೀರುವ ದೇವಶಾಂತಿಯು ನಿಮ್ಮ ಹೃದಯಗಳನ್ನೂ ಯೋಚನೆಗಳನ್ನೂ ಕ್ರಿಸ್ತ ಯೇಸುವಿನಲ್ಲಿ ಕಾಯುವದು,"* ಫಿಲಿಪ್ಪಿಯವರಿಗೆ 4:7. ಈ ಸಮಾಧಾನವು ಯಾವುದೆಂದರೆ, ಸತ್ಯವೇದ ಅಧ್ಯಯನ, ಆತ್ಮಿಕ ತಿಳುವಳಿಕೆ, ಹಾಗೂ ಆತ್ಮಿಕ ಪರಿಪಕ್ವತೆಯುಳ್ಳ ಸಲಹೆಗಾರರಿಂದ ಒಳನೋಟವನ್ನು ಹಿಂಬಾಲಿಸುವ ಕುರಿತು ದೇವರು ಬಹಿರಂಗಪಡಿಸಿದ ಆಳವಾದ ಅರ್ಥವಾಗಿದೆ. ಹುಡುಕಿರಿ ಮತ್ತು ಆತನ ಸಾಮಾಧಾನಕ್ಕಾಗಿ ಕಾಯಿರಿ.

**ಕಾರ್ಯರೂಪ.** ಆತನ ಚಿತ್ತದಲ್ಲಿ ನೀವು ಏನಾದರೂ ಬೇಡಿಕೊಂಡರೆ, ಪೌಲನಿಗಾದ ರೀತಿಯಲ್ಲಿ "ಇಲ್ಲ" ಎಂಬ ಉತ್ತರವಿರಬಹುದು, 2 ಕೊರಿಂಥದವರಿಗೆ 12:7-10. ಒಂದು ವೇಳೆ "ಕಾಯಿರಿ" ಎಂದು ಇರಬಹುದು. "ಕಾಯಿರಿ" ಎಂಬ ಆತನ ಉತ್ತರವು ದೊಡ್ಡ ಆಶೀರ್ವಾದಕ್ಕೆ ಕಾರಣವಾಗಬಹುದು, ಯೆಶಾಯ 40:31. ದೇವರ ಉತ್ತರವು "ಹೌದು" ಎಂದಾಗ, ಅದು ಕಷ್ಟಕರ, ಅಪ್ರಸಿದ್ಧ, ಅಥವಾ ಹೆಚ್ಚಿನ ಮೌಲ್ಯವುಳ್ಳದಾಗಿದ್ದರೂ ಸಹ ಆತನ ಚಿತ್ತವನ್ನು ನೆರವೇರಿಸಿ. ನಮ್ಮ ಹೃದಯದಿಂದ ಆತನ ಚಿತ್ತವನ್ನು ನೆರವೇರಿಸಲು ಸಂತೋಷಿಸಬೇಕು, ಕೀರ್ತನೆ 40:8, ಎಫೆಸ 6:5-6. ಕ್ರಿಸ್ತ ಹೆಸರಿನಲ್ಲಿ ಮೋಸಗೊಳಿಸುವ ಉತ್ತರಿಗಳಿಂದ ಕಲಿಸುವ ಪ್ರಾರ್ಥನೆ ಬಗ್ಗೆ ಜಾಗರೂಕರಾಗಿರಿ. ನೀವು ದೇವರ ಚಿತ್ತವನ್ನು ತಿಳಿದಿದ್ದೀರೆಂದು ನಿಶ್ಚಯವಾಗಿದ್ದರೆ ವಿಧೇಯರಾಗಿರಿ.

---

*ನಾನು ದೇವರ ಚಿತ್ತವನ್ನು ತಿಳಿದುಕೊಳ್ಳುವುದು ಹೇಗೆ?* © 2025 John D. Morris III ರವರು ಅಪೊಸ್ತಲರ ಕೃತ್ಯಗಳು ಒಂದು ಎಂಟರಿಂದ ಪ್ರಕಟಿಸಿದ್ದಾರೆ. ಈ ಪೂರ್ಣ ಹೇಳಿಕೆಯನ್ನು ಒಳಗೊಂಡಂತೆ ನೀವು ಅದನ್ನು ಮುಕ್ತವಾಗಿ ಮುದ್ರಿಸಬಹುದು, ನಕಲಿಸಬಹುದು, ಪೋಸ್ಟ್ ಮಾಡಬಹುದು, ಇಮೇಲ್ ಮಾಡಬಹುದು ಅಥವಾ ಸಂದೇಶ ಕಳುಹಿಸಬಹುದು. ನೀವು ನಿಮ್ಮ ಸೇವೆಯ ಅಥವಾ ಸಭೆಯ ಹೆಸರು ಅಥವಾ ಲೋಗೋವನ್ನು ಪುಟ ಒಂದರ ಮೇಲ್ಭಾಗದಲ್ಲಿ ಸೇರಿಸಬಹುದು ಮತ್ತು ಪುಟ ಎರಡರ ಕೆಳಭಾಗದಲ್ಲಿರುವ ಘನ ರೇಖೆಯ ಮೇಲೆ ನಿಮ್ಮ ಸಂಪರ್ಕ ಮಾಹಿತಿಯನ್ನು ಸೇರಿಸಬಹುದು. WillofGod316.org ಸತ್ಯವೇದವನ್ನು ಆಧರಿಸಿದೆ. ದೇವರ ಚಿತ್ತವನ್ನು ಕಂಡುಕೊಳ್ಳಲು ವಿಶ್ವಾಸಿಗಳಿಗೆ ಇದು ಸಹಾಯ ಮಾಡುತ್ತದೆ. ನೀವು ಅಪೊಸ್ತಲರ ಕೃತ್ಯಗಳು ಒಂದು ಎಂಟು (ಸಾಧ್ಯವಾದರೆ ಇಂಗ್ಲಿಷ್‌ನಲ್ಲಿ) Hello@Mail316.org. ಅನುವಾದದ ಸೇವೆಗಳನ್ನು www.ChristianLingua.com ಒದಗಿಸಲಾಗಿದೆ. *ನಾನು ದೇವರ ಚಿತ್ತವನ್ನು ತಿಳಿದುಕೊಳ್ಳುವುದು ಹೇಗೆ?* www.WillofGod316.org ನಲ್ಲಿ ನಲವತ್ತೆಂಟು ಭಾಷೆಗಳಲ್ಲಿ ಉಚಿತವಾಗಿ ಲಭ್ಯವಿದೆ. ಇಂಗ್ಲಿಷ್ ಆವೃತ್ತಿಯಲ್ಲಿನ ಸತ್ಯವೇದದ ಉಲ್ಲೇಖಗಳು ದಿ ಲಾಕ್‌ಮನ್ ಫೌಂಡೇಶನ್‌ನ ನ್ಯೂ ಅಮೇರಿಕನ್ ಸ್ಟ್ಯಾಂಡರ್ಡ್ ಬೈಬಲ್ 1995 ರಿಂದ ಬಂದಿವೆ. ಈ ಅನುವಾದದಲ್ಲಿನ ಸತ್ಯವೇದದ ಉಲ್ಲೇಖಗಳು Kannada study Bible JV Version (https://itunes.apple.com/app/id1502429709) ರಿಂದ ಬಂದಿವೆ.